A-PDF Merger DEMO : Purchase from www.A-PDF.com to remove the watermark

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2011-12ನೇ ಸಾಲಿಗೆ ಮಹರ್ಷಿ ವಾಲ್ಮೀಕಿ ಭವನಗಳನ್ನು ನಿರ್ಮಿಸುವ ಬಗ್ಗೆ.

*****

**ಪ್ರಸ್ತಾವನೆ:-**

ಮಾನ್ಯ ಶಾಸಕರು ಹಾಗೂ ವಿವಿಧ ಚುನಾಯಿತ ಪ್ರತಿನಿಧಿಗಳು ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ಸಲ್ಲಿಸಿದ ಮನವಿಗಳ ಮೇರೆಗೆ ಯಾದಗಿರಿ ಜಿಲ್ಲೆಯ ಕೆಳಕಂಡ ಸ್ಥಳಗಳಲ್ಲಿ ಮಹರ್ಷಿ ವಾಲ್ಮೀಕಿ ಭವನಗಳನ್ನು ನಿರ್ಮಿಸಲು ಉದ್ದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಸಕಇ 180 ಪಕವಿ 2011 (1), ಬೆಂಗಳೂರು ದಿನಾಂಕ:03-11-2011**

ಯಾದಗಿರಿ ಜಿಲ್ಲೆಯ ಈ ಕೆಳಕಂಡ ಸ್ಥಳಗಳಲ್ಲಿ 2011-12ನೇ ಸಾಲಿಗೆ ಒಟ್ಟು ರೂ.30.00 ಲಕ್ಷಗಳ (ಮೂವತ್ತು ಲಕ್ಷ ರೂಪಾಯಿಗಳು ಮಾತ್ರ) ವೆಚ್ಚದಲ್ಲಿ ಮಹರ್ಷಿ ವಾಲ್ಮೀಕಿ ಭವನಗಳನ್ನು ನಿರ್ಮಿಸಲು ಸರ್ಕಾರದ ತಾತ್ವಿಕ ಮಂಜೂರಾತಿ ನೀಡಲಾಗಿದೆ.

| ಕ್ರಮ ಸಂಖ್ಯೆ | ಸ್ಥಳ | ರೂ.ಲಕ್ಷಗಳಲ್ಲಿ |
|---|---|---|
| 1 | ಯರಕೆಹಾಳ (ಸುರಪುರ ತಾ:) | 10.00 |
| 2 | ತಿಂಥಣಿ (ಸುರಪುರ ತಾ:) | 10.00 |
| 3 | ಬೈಲಾಪುರ (ಸುರಪುರ ತಾ:) | 10.00 |
| | ಒಟ್ಟು | 30.00 |

**ಷರತ್ತುಗಳು:-**

(1) ಸರ್ಕಾರ ಆದೇಶ ಸಂಖ್ಯೆ:ಸಕಇ 180 ಪಕವಿ 2011 ದಿನಾಂಕ:28-09-2011 ರ ಅನುಬಂಧದಲ್ಲಿ ಸೂಚಿಸಿರುವ ಮಾರ್ಗಸೂಚಿಗಳು ಅನ್ವಯವಾಗುತ್ತವೆ. ಅಂತೆಯೇ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು.

(2) ಭವನದ ನಿರ್ಮಾಣ ವೆಚ್ಚವು ಉಲ್ಲೇಖಿತ ಅಂದಾಜು ವೆಚ್ಚ ಮೀರಿದ್ದಲ್ಲಿ ಅಂತಹ ಮೊತ್ತವನ್ನು ಸ್ಥಳೀಯ ಮೂಲಗಳಿಂದ ಭರಿಸತಕ್ಕದ್ದು.

(3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (1999) ಹಾಗೂ ಅದರಡಿ ರೂಪಿಸಿರುವ ನಿಯಮಗಳಲ್ಲಿ ನಿಗದಿಗೊಳಿಸಿರುವ "ಕಾರ್ಯವಿಧಾನ" (procedure) ಪಾಲಿಸತಕ್ಕದ್ದು.